ಓ.ಎಸ್. **4/2017** ಪಿಡಬ್ಲ್ಯೂ 1

ಸಾಕ್ಷಿಯನ್ನು ದಿಃ 09.10.2019 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀಸವಾಲುಃ ಪ್ರತಿವಾದಿಗಳ ಪರ ಶ್ರೀ ಕೆ.ಕೆ.ಜಿ. ವಕೀಲರಿಂದಃ

ಮೃತ ಸಣ್ಣೇಗೌಡರಿಗೆ **5** ಜನ ಮಕ್ಕಳೆಂದರೆ ಸರಿ. ಅವರುಗಳ ಹೆಸರು ಸಿದ್ದೇಗೌಡ, ಮರೀಗೌಡ, ಶಂಕರೇಗೌಡ, ಶಿವಯ್ಯ ಮತ್ತು ಸೀತಾರಾಮು ಎಂದರೆ ಸರಿ. ಅವರುಗಳು ಮೃತಪಟ್ಟಿರುತ್ತಾರೆ ಎಂದರೆ ಸರಿ. ಸಿದ್ದೇಗೌಡರ ಹೆಂಡತಿ ಮೃತ ಪಟ್ಟಿರುತ್ತಾರೆ. ಸಿದ್ದೇಗೌಡರಿಗೆ ಒಬ್ಬಳು ಹೆಣ್ಣು ಮಗಳು ಇದ್ದಾಳೆ ಎಂದರೆ ಸರಿಯಲ್ಲ. ಶಂಕರೇಗೌಡರ ಹೆಂಡತಿ ಲಕ್ಷ್ಮಮ್ಮ ಎನ್ನುವವರು ಜೀವಂತ ಇದ್ದಾರೆ ಎಂದರೆ ಸರಿ. ಶಂಕರೇಗೌಡರಿಗೆ ಗೀತಾ ಉಃ ನಿಂಗಮ್ಮ ಎಂಬ ಹೆಸರಿಗೆ ಮಗಳಿದ್ದಾಳೆ ಎಂದರೆ ಸರಿ. ನನ್ನ ತಾಯಿ ಜೀವಂತವಿದ್ದಾರೆ ಎಂದರೆ ಸರಿ. ನನ್ನ ಒಡಹುಟ್ಟಿದ ಸಹೋದರಿಯರಾದ ಉಮಾದೇವಿ, ವಸಂತ, ಮಂಜುಳ, ಸಾಕಮ್ಮ ಹಾಗೂ ಹೇಮಲತ ಎಂಬುವವರು ಜೀವಂತವಿದ್ದಾರೆ ಎಂದರೆ ಸರಿ. ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಹಾಗೂ ಪಕ್ಷಗಾರರನ್ನಾಗಿ ಮಾಡಲು ನನಗೆ ತೊಂದರೆ ಇಲ್ಲ ಎಂದರೆ ಸಾಕ್ಷಿ ನುಡಿಯುತ್ತಾರೆ ಮಾಡಬಹುದು ಅವರಿಗೆ ಮದುವೆ ಮಾಡಿಕೊಟ್ಟಿರುವ ಕಾರಣ ಅವರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ.

ಸೀತಾರಾಮು ಎನ್ನುವವರು ನಿಂಗಾಜಮ್ಮ ರವರ ಮನೆಯಲ್ಲಿ ವಾಸವಿದ್ದರು ಎಂದರೆ ಸರಿಯಲ್ಲ. ನಿಂಗಾಜಮ್ಮ ಹಾಗೂ ಸೀತಾರಾಮು ಎಂಬುವವರ ಮಧ್ಯ ಯಾವ ಯಾವ ದಾಖಲಾತಿಗಳಾಗಿವೆ ಎಂದು ನನಗೆ ಗೊತ್ತಿಲ್ಲ. ನಿಂಗಾಜಮ್ಮ ಮತ್ತು ನಾನು ಒಂದೇ ಊರಿನವರೆಂದರೆ ಸರಿ. ದಿನಾಂಕ **16.10.1966** ರಂದು ಸದರಿ ನಿಂಗಾಜಮ್ಮ ಎನ್ನುವವರು ಸೀತಾರಾಮು ಎಂಬುವವರನ್ನು ನಮ್ಮ ಕುಟುಂಬದಿಂದ ದತ್ತು ಪಡೆದಿದ್ದಾರೆಂದರೆ ನನಗೆ ಗೊತ್ತಿಲ್ಲ. ಆ ಬಗ್ಗೆ ದತ್ತು ಪತ್ರ ಉಪನೊಂದಾಣಾಧಿಕಾರಿಗಳ ಕಛೇರಿಯಲ್ಲಿ

ನೊಂದಣಿಯಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸೀತಾರಾಮು ಎಂಬುವವರು ನಮ್ಮ ಕುಟುಂಬದಿಂದ ದತ್ತುಹೋದ ಕಾರಣ ನಮಗೂ ಅವರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸಾಕ್ಷಿ ನುಡಿಯುತ್ತಾರೆ ಅವರು ನಮ್ಮ ಜೊತೆ ವಾಸವಾಗಿದ್ದರು. ಸದರಿ ನಿಂಗಾಜಮ್ಮ ಎಂಬುವವರ ಕುಟುಂಬಕ್ಕೆ ಸೇರಿದ ಕಡಬ ಗ್ರಾಮದ ಸ.ನಂ. 80/1, 5/7, 128/4, 84/6 ಪಿ1, 75/2, 55/2, 53/2, 5/4 ಎ ಹಾಗೂ 73/4 ರ ಜಮೀನುಗಳ ಕಂದಾಯ ದಾಖಲೆಗಳು ಸೀತಾರಾಮು ಎಂಬುವವರ ಹೆಸರಿಗೆ ದತ್ತು ಮೂಲಕ ವರ್ಗಾವಣೆ ಆಗಿದೆ ಎಂದರೆ ಬಂದಿಲ್ಲ ಆ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಸ್ವತ್ತುಗಳು ಸೀತಾರಾಮು ಎನ್ನುವವರ ಹೆಸರಿಗೆ ಹೇಗೆ ಬಂತೆಂದು ನಾನು ತಿಳಿದುಕೊಂಡಿಲ್ಲ ಎಂದರೆ ಸರಿ.

ಸೀತಾರಾಮು ರವರನ್ನು ಹೊರತು ಪಡಿಸಿ ಸಣ್ಣೇಗೌಡರ ಉಳಿದ 4 ಜನ ಮಕ್ಕಳು ಅವರ ಕುಟುಂಬಕ್ಕೆ ಸೇರಿದ ಆಸ್ತಿಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಉಳುಮೆ ಮಾಡುತ್ತಿದ್ದಾರೆಂದರೆ ಸಾಕ್ಷಿ ನುಡಿಯುತ್ತಾರೆ ಎಲ್ಲರೂ ಸ್ವಲ್ಪ ಸ್ವಲ್ಪ ಉಳುಮೆ ಮಾಡುತ್ತಾ ಜೀವನ ಮಾಡುತ್ತಿದ್ದಾರೆ. 1980 ನೇ ಸಾಲಿನಿಂದ ಆ ರೀತಿ ಪ್ರತ್ಯೇಕವಾಗಿ ಮೌಖಿಕ ವಿಭಾಗ ಮಾಡಿಕೊಂಡು ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. 1980 ರಲ್ಲಿ ನಾನು ಜನಿಸಿಲ್ಲದ ಕಾರಣ ನನಗೆ ಸದರಿ ವಿಭಾಗದ ಬಗ್ಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನನ್ನ ಸಹೋದರಿಯರಿಗೆ ಆ ರೀತಿ ವಿಭಾಗದ ವಿಚಾರ ಗೊತ್ತಿರುವ ಕಾರಣ ಅವರನ್ನು ಈ ದಾವೆಯಿಂದ ಕೈ ಬಿಟ್ಟಿದ್ದೇನೆ ಎಂದರೆ ಸರಿಯಲ್ಲ. 1980 ರಲ್ಲಿ ಸಂಕ್ರಾಂತಿಯ ಸುಗ್ಗಿಯಲ್ಲಿ ಮಾಡಿಕೊಂಡ  ಮೌಖಿಕ ವಿಭಾಗದ ಪ್ರಕಾರ ದಾವಾ ಐಟಂ ಸಂಖ್ಯೆ 3 ರಲ್ಲಿ 2 ಗುಂಟೆ, ದಾವಾ ಐಟಂ ಸಂಖ್ಯೆ 7 ರಲ್ಲಿ ಒಂದು ಎಕರೆ, ದಾವಾ ಐಟಂ ಸಂಖ್ಯೆ 8 ರಲ್ಲಿ 1 ಎಕರೆ 36 ಗುಂಟೆ ಹಾಗೂ ಕಡಬ ಗ್ರಾಮದ ಕ್ರಮ ಸಂಖ್ಯೆ 20 ನಿರ್ಧರಣಾ ಸಂಖ್ಯೆ 8/2 ಹಾಗೂ ಸ್ವತ್ತಿನ

ಸಂಖ್ಯೆ 20 ರ ಮನೆ ಸಿದ್ದೇಗೌಡರ ಹಿಸ್ಸೆಗೆ ಹೋಗಿದ್ದು ಅವರೇ ಅದರ ಪ್ರತ್ಯೇಕ ಸ್ವಾಧೀನುಭವ ಹೊಂದಿದ್ದಾರೆ ಎಂದರೆ ಸಾಕ್ಷಿ ನುಡಿಯುತ್ತಾರೆ ಯಾವುದೇ ವಿಭಾಗವಾಗಿಲ್ಲ. ಸದರಿ ವಿಭಾಗದಲ್ಲಿ ಮರೀಗೌಡರ ಹೆಸರಿಗೆ ದಾವಾ 5 ನೇ ಐಟಂ ಸ್ವತ್ತಿನಲ್ಲಿ 1 ಎಕರೆ 10 ಗುಂಟೆ, ದಾವಾ ಐಟಂ ಸಂಖ್ಯೆ 7 ರಲ್ಲಿ 1 ಎಕರೆ 20 ಗುಂಟೆ, ಹಾಗೂ ದಾವಾ ಐಟಂ ಸಂಖ್ಯೆ 9 ರಲ್ಲಿ 2 ಅಂಕಣದ ಮನೆ ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ಸ್ವತ್ತನ್ನು ಮರೀಗೌಡರು ಪ್ರತ್ಯೇಕವಾಗಿ ಸ್ವಾಧೀನುಭವ ಹೊಂದಿ ಉಳುಮೆ ಮಾಡುತ್ತಿದ್ದರು ಎಂದರೆ ಸರಿಯಲ್ಲ.

ಸೀತಾರಾಮು ಎಂಬುವವರನ್ನು ನಾನು ನೋಡಿದ್ದೇನೆ. ಅವರ ಬರವಣಿಗೆಗಳು ಹಾಗೂ ಸಹಿಯನ್ನು ನಾನು ನೋಡಿಲ್ಲ. ನಾನು ಈಗ ನೋಡುತ್ತಿರುವ ದಿನಾಂಕ 18.11.1994 ರ ನೋಂದಾಯಿತ ವಿಲ್ ನಲ್ಲಿರುವ 1 ನೇ ಸಾಕ್ಷಿ ಸಹಿ ಹಾಗೂ ಬರವಣಿಗೆಗಳು ಸೀತಾರಾಮು ರವರದ್ದು ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 18.11.1994 ರಂದು ಮರೀಗೌಡರು ಅವರ ಬುದ್ದಿ ಶಕ್ತಿ ಆರೋಗ್ಯ ಚೆನ್ನಾಗಿರುವಾಗಲೇ ಅವರ ಭಾಗಕ್ಕೆ ಬಂದ ಸ್ವತ್ತುಗಳನ್ನು 1 ಮತ್ತು 2 ನೇ ಪ್ರತಿವಾದಿಗಳಿಗೆ ವಿಲ್ ಮೂಲಕ ವಿಲೇ ಮಾಡಿದ್ದಾರೆ ಎಂದರೆ ಸಾಕ್ಷಿ ನುಡಿಯುತ್ತಾರೆ ಯಾವುದೇ ಭಾಗಾಂಶ ನೀಡಿರಲಿಲ್ಲ. ಮರೀಗೌಡರ ಮರಣದ ನಂತರ ಸದರಿ ವಿಲ್ ನ ಆಧಾರದಲ್ಲಿ 1 ಮತ್ತು 2 ನೇ ಪ್ರತಿವಾದಿಗಳು ಸದರಿ ಸ್ವತ್ತುಗಳ ಕಂದಾಯ ದಾಖಲೆಗಳನ್ನು ಬದಲಾವಣೆ ಮಾಡಿಸಿಕೊಂಡು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ.

1980 ರ ಮೌಖಿಕ ವಿಭಾಗದ ಪ್ರಕಾರ ಶಂಕರೇಗೌಡರ ಹಿಸ್ಸೆಗೆ ದಾವಾ 2 ನೇ ಐಟಂ ಸ್ವತ್ತಿನಲ್ಲಿ 23 ಗುಂಟೆ, ದಾವಾ 3 ನೇ ಐಟಂ ಸ್ವತ್ತಿನಲ್ಲಿ 6 ಗುಂಟೆ, ದಾವಾ 5 ನೇ ಐಟಂ ಸ್ವತ್ತಿನಲ್ಲಿ 1 ಎಕರೆ 10 ಗುಂಟೆ, ದಾವಾ 7 ನೇ ಐಟಂ ಸ್ವತ್ತಿನಲ್ಲಿ 1 ಎಕರೆ 20 ಗುಂಟೆ

ಹಾಗೂ ದಾವಾ 9 ನೇ ಐಟಂ ಸ್ವತ್ತಿನಲ್ಲಿ ಮೂರನೇ ಒಂದು ಭಾಗದ ಮನೆ ಬಂದಿರುತ್ತದೆ ಎಂದರೆ ಸರಿಯಲ್ಲ.

ಅದೇ ರೀತಿ 1980 ರ ಮೌಖಿಕ ವಿಭಾಗದಲ್ಲಿ ನನ್ನ ತಂದೆಗೆ ದಾವಾ 1 ನೇ ಐಟಂ ಸ್ವತ್ತಿನಲ್ಲಿ 1 ಎಕರೆ 32 ಗುಂಟೆ, ದಾವಾ 3 ನೇ ಐಟಂ ಸ್ವತ್ತಿನಲ್ಲಿ 2 ಗುಂಟೆ, ದಾವಾ 4 ನೇ ಐಟಂ ಸ್ವತ್ತಿನಲ್ಲಿ 18 ಗುಂಟೆ, ದಾವಾ 6 ನೇ ಐಟಂ ಸ್ವತ್ತಿನಲ್ಲಿ 22 ಗುಂಟೆ, ದಾವಾ 7 ನೇ ಐಟಂ ಸ್ವತ್ತಿನಲ್ಲಿ 20 ಗುಂಟೆ, ದಾವಾ 9 ನೇ ಐಟಂ ಮನೆಯಲ್ಲಿ ಒಂದನೇ ಮೂರು ಭಾಗ, ಕಡಬ ಗ್ರಾಮಕ್ಕೆ ಸೇರಿದ ಸ್ವತ್ತಿನ ಕ್ರಮ ಸಂಖ್ಯೆ 115, ನಿರ್ಧರಣಾ ಸಂಖ್ಯೆ 66 ಹಾಗೂ ಸ್ವತ್ತಿನ ಸಂಖ್ಯೆ 120 ಮತ್ತು ಕ್ರಮ ಸಂಖ್ಯೆ 21, ನಿರ್ಧರಣಾ ಸಂಖ್ಯೆ 9/1, ಹಾಗೂ ಸ್ವತ್ತಿನ ಸಂಖ್ಯೆ 21 ರ ಮನೆ ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ವಿಭಾಗದಲ್ಲಿ ಅವರವರ ಭಾಗದ ಹಿಸ್ಸೆಗಳನ್ನು ಅವರವರು ಪ್ರತ್ಯೇಕವಾಗಿ ಸ್ವಾಧೀನುಭವದಲ್ಲಿದ್ದು ಒಟ್ಟು ಕುಟುಂಬ ಅಸ್ತಿತ್ವದಲ್ಲಿ ಇಲ್ಲ ಎಂದರ ಸರಿಯಲ್ಲ. ಕಡಬ ಗ್ರಾಮ ಠಾಣೆಗೆ ಸೇರಿದ ಕ್ರಮಸಂಖ್ಯೆ 19, ನಿರ್ಧರಣಾ ಸಂಖ್ಯೆ 8 /1 ರಲ್ಲಿರುವ ಮನೆ, ಕ್ರಮ ಸಂಖ್ಯೆ 21, ನಿರ್ದರಣಾ ಸಂಖ್ಯೆ 9/1 ರಲ್ಲಿರುವ ಮನೆ, ಕ್ರಮ ಸಂಖ್ಯೆ 115 ನಿರ್ಧರಣಾ ಸಂಖ್ಯೆ 66, ಸ್ವತ್ತಿನ ಸಂಖ್ಯೆ 120 ಹಾಗೂ ಕ್ರ.ಸಂಖ್ಯೆ 20, ನಿರ್ಧರಣಾ ಸಂಖ್ಯೆ 80/2 ರಲ್ಲಿರುವ ಮನೆಯನ್ನು ನಾನು ಉದ್ದೇಶ ಪೂರ್ವಕವಾಗಿ ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿ ನುಡಿಯುತ್ತಾರೆ ಅವುಗಳ ದಾಖಲಾತಿಗಳು ನಮ್ಮ ತಂದೆಯ ಹೆಸರಿನಲ್ಲಿಲ್ಲ. ಕ್ರಮ ಸಂಖ್ಯೆ 115 ನಿರ್ಧಾರಣಾ ಸಂಖ್ಯೆ 66 ರ ಖಾತೆ ನನ್ನ ತಾಯಿಯ ಹೆಸರಿನಲ್ಲಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸ್ವತ್ತು ನನ್ನ ತಂದೆಗೆ ವಿಭಾಗದಲ್ಲಿ ಬಂದಿದೆ ಎಂದರೆ ಸಾಕ್ಷಿ ನುಡಿಯುತ್ತಾರೆ ಆ ಬಗ್ಗೆ ದಾಖಲೆಗಳು ಇರುವುದಿಲ್ಲ ಆದರೆ ಕಂದಾಯ ಅಧಿಕಾರಿಗಳ ಕಛೇರಿಯಲ್ಲಿ ಬೋಗಸ್ ದಾಖಲೆ

ಮಾಡಿದ್ದಾರೆ. ಸಿದ್ದೇಗೌಡರ ಭಾಗಾಂಶಕ್ಕೆ ಬಂದಿದ್ದ ಕ್ರಮ ಸಂಖ್ಯೆ 20, ನಿರ್ಧರಣಾ ಸಂಖ್ಯೆ 8/2 ರ ಸ್ವತ್ತನ್ನು ಅವರ ಮರಣದ ನಂತರ ಅವರ ಸೊಸೆ ಚನ್ನಮ್ಮ ಎನ್ನುವವರ ಹೆಸರಿಗೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಮೇಲೆ ಸೂಚಿಸಿದ ಎಲ್ಲಾ ಸ್ವತ್ತುಗಳು ಸಹ ಪಿತ್ರಾರ್ಜಿತ ಆಸ್ತಿ ಎಂಬ ವಿಚಾರ ನನಗೆ ಗೊತ್ತಿದ್ದರೂ ಸಹಾ ಪ್ರತಿವಾದಿಗಳ ತಂದೆಗೆ ಬಂದಿರುವ ಸ್ವತ್ತುಗಳನ್ನು ಮಾತ್ರ ಈ ದಾವೆಯಲ್ಲಿ ಸೇರಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಕಾವೇರಿ ನೀರಾವರಿ ನಿಗಮದಿಂದ ದಾವಾ ಐಟಂ ಸಂಖ್ಯೆ 7 ಮತ್ತು 8 ರ ಜಮೀನಿಗೆ ಸಂಬಂಧಿಸಿದ ಭೂ ಪರಿಹಾರದ ಹಣವನ್ನು 3 ನೇ ಪ್ರತಿವಾದಿ ಮಾತ್ರ ಪಡೆದಿದ್ದಾರೆಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಗೆ ಬಂದಿರುವ ಹಿಸ್ಸೆಯಲ್ಲಿ ಅವರು ಯಾವುದೇ ಪರಿಹಾರ ಪಡೆದಿಲ್ಲ ಎಂದರೆ ಸರಿಯಲ್ಲ. ಸೀತಾರಾಮು ರವರು ಹಿಂದೆಯೇ ದತ್ತು ಹೋಗಿರುವ ವಿಚಾರ ಗೊತ್ತಿದ್ದರೂ ಸಹಾ ಆಸ್ತಿಗಳನ್ನು ಲಪಟಾಯಿಸಲು 4 ರಿಂದ 6 ನೇ ವಾದಿಗಳನ್ನು ಸೇರಿಸಿಕೊಂಡು ಈ ದಾವೆಯನ್ನು ಹಾಕಿದ್ದೇನೆ ಎಂದರೆ ಸರಿಯಲ್ಲ. ಸೀತಾರಾಮು ಎನ್ನುವವರು ನಮ್ಮ ಜೊತೆ ವಾಸವಾಗಿಲ್ಲದೇ ಇದ್ದರು ಅವರು ನಮ್ಮ ಜೊತೆ ವಾಸವಾಗಿದ್ದರು ಎಂದರೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸೀತಾರಾಮು ಹಾಗೂ ಅವರ ಹೆಂಡತಿ ಮಕ್ಕಳಿಗೆ ದಾವಾ ಸ್ವತ್ತುಗಳಲ್ಲಿ ಯಾವುದೇ ಭಾಗಾಂಶದ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹಾ ನಾನು ಉದ್ದೇಶ ಪೂರ್ವಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಪಾಂಡವಪುರ**